# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC 208/2024**

**CW 13**

**PW5**

| | | |
|---|---|---|
| ಸಾಕ್ಷಿಯ ಹೆಸರು | ಃ | ನಾಗೇಶ್ |
| ತಂದೆ ಹೆಸರು | ಃ | ಪದ್ಮಯ್ಯ ಗೌಡ |
| ಪ್ರಾಯ | ಃ | 50 ವರ್ಷ |
| ಉದ್ಯೋಗ | ಃ | ಹೆಚ್.ಸಿ., ಅಜೆಕಾರು ಪೋಲೀಸ್ ಠಾಣೆ |
| ವಾಸ | ಃ | ಅಜೆಕಾರು |

ದಿನಾಂಕ : **10.10.2025** ರಂದು ಪಿಡಬ್ಲ್ಯೂ - 5/ಸಿಡಬ್ಲ್ಯೂ - 13 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ನಾನು 2022 ರಿಂದ ಇಲ್ಲಿಯವರೆಗೆ ಅಜೆಕಾರು ಪೋಲೀಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. ದಿನಾಂಕ 14.02.2024 ರಂದು ರಾತ್ರಿ 8.10 ರ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾ.ಸಾ. 1 ರವರು ಠಾಣೆಗೆ ಹಾಜರಾಗಿ ನೀಡಿದಂತಹ ದೂರನ್ನು ಸ್ವೀಕರಿಸಿ ಪ್ರ.ವ. ವರದಿಯನ್ನು

CC 208/2024
CW13
PW5

ಕ್ರೈಮ್ ಸಂಖ್ಯೆ 11/2020 ರಂತೆ ದಾಖಲಿಸಿರುತ್ತೇನೆ. ದೂರನ್ನು ನಿಪಿ - 1 ಎಂದು ಈಗಾಗಲೇ ಗುರುತಿಸಿದ್ದು, ಅದರಲ್ಲಿನ ನನ್ನ ಸಹಿಯನ್ನು ನಿಪಿ - 1(ಬಿ) ಎಂದು ಗುರುತಿಸಲಾಯಿತು. ಪ್ರ. ವ ವರದಿಯನ್ನು ನಿಪಿ - 11 ಎಂದು, ನನ್ನ ಸಹಿಯನ್ನು ನಿಪಿ - 11(ಎ) ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಯನ್ನು ಚಾಸಾ 16 ರವರಿಗೆ ವಹಿಸಿರುತ್ತೇನೆ. ದಿಃ 15.02.2024 ರಂದು ಚಾಸಾ 16 ರವರ ಜೊತೆ ತಕ್ಷೀರು ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ನಂತರ ಮಹಜರನ್ನು 9 ರಿಂದ 10 ಗಂಟೆಯ ವರೆಗೆ ಚಾಸಾ 16 ರವರ ಆದೇಶದಂತೆ ನಾನು ಲ್ಯಾಪ್ ಟಾಪ್ ನಲ್ಲಿ ದಾಖಲಿಸಿರುತ್ತೇನೆ. ಮಹಜರನ್ನು ಈಗಾಗಾಲೇ ನಿಪಿ - 2 ಎಂದು ಗುರುತಿಸಿದ್ದು, ಅದರಲ್ಲಿನ ನನ್ನ ಸಹಿಯನ್ನು ನಿಪಿ - 2(ಬಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತಯಾರಿಸಿದ ನಕಾಶೆಯನ್ನು ನಾನು ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ - 3 ಎಂದು ಗುರುತಿಸಲಾಗಿದೆ. ಅದರಲ್ಲಿನ ನನ್ನ ಸಹಿಯನ್ನು ನಿಪಿ - 3(ಬಿ) ಎಂದು ಗುರುತಿಸಲಾಯಿತು. ನಿಪಿ - 4 ಮತ್ತು 5 ರಲ್ಲಿ ನಾನು ಕಂಡು ಬರುತ್ತೇನೆ. ನಂತರ ತನಿಖಾಧಿಕಾರಿಯವರ ಜೊತೆಗೆ ಹೆಬ್ರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋಗಿ ಅವರ ಆದೇಶದ ಮೇರೆಗೆ 10.30 ರಿಂದ 12.30 ರವರೆಗೆ ನಿಪಿ - 9 ರಂತೆ ಶವ ತನಿಖಾ ಮಹಜರನ್ನು ಬರೆದಿರುತ್ತೇನೆ. ನಂತರ ಮೃತ ದೇಹವನ್ನು ಶವ ಪರೀಕ್ಷೆಗೆ ವೈದ್ಯರಿಗೆ ಹಾಜರುಪಡಿಸಿರುತ್ತೇನೆ. ಶವ ಪರೀಕ್ಷೆ ಆದ ನಂತರ ಮೃತದೇಹವನ್ನು ವಾರೀಸುದಾರರಿಗೆ ಬಿಟ್ಟುಕೊಟ್ಟಿರುತ್ತೇವೆ.

<u>ಪಾಟೀ ಸವಾಲುಃ</u> ಶ್ರೀ ಪಿ.ಎ.ಎಸ್. 11 ನೇ ಆರೋಪಿ ಪರ ವಕೀಲರಿಂದಃ

ಈ ಪ್ರಕರಣದಲ್ಲಿ ದೂರನ್ನು ನೀಡಿದ್ದಾರೆ ಎಂದು ಹೇಳಿದವರು ತಕ್ಷೀರು ಸ್ಥಳದಿಂದ ಸುಮಾರು 60 ಕಿಲೋ ಮೀಟರ್ ದೂರದಲ್ಲಿ ಇರುವವರು ಎಂದರೆ ಸರಿ. ಅವರು ದುರ್ಗಾ ಕನ್ಸ್ಟ್ರಕ್ಷನ್ ಕಂಪನಿಯ ಮ್ಯಾನೇಜರ್ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಈ ಪ್ರಕರಣಕಕ್ಷ್ ಅನುಕೂಲವಾಗುವಂತೆ ನಾವೇ ದೂರನ್ನು ಬರೆಸಿ, ಪ್ರ. ವ ವರದಿಯನ್ನು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣ ದಾಖಲು ಮಾಡಿದ ಕೂಡಲೇ ಅದು ಐ.ಪಿ.ಸಿಯ ಕಲಂ 304(ಎ) ಅಡಿಯಲ್ಲಿ ಬರುವಂತಹ ಪ್ರಕರಣ ಎಂದು ನನಗೆ ತಿಳಿದಿರುತ್ತದೆ. ಸ್ಥಳ ಮಹಜರು ಮತ್ತು ನಕಾಶೆಯನ್ನು ಠಾಣೆಯಲ್ಲಿ ಪ್ರಕರಣಕ್ಕೆ ಅನುಕೂಲಕ್ಕೆ ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ತಕ್ಷೀರು ಸ್ಥಳಕ್ಕೆ ನಾವು ಯಾರೂ ಹೋಗಿರುವುದಿಲ್ಲ ಮತ್ತು ತಕ್ಷೀರು ಸ್ಥಳವನ್ನು ಯಾರೂ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಠಾಣೆಯ ದಾಖಲೆಗಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೆವೆ ಎಂದರೆ ಸರಿಯಲ್ಲ.

**CC 208/2024**
**CW13**
**PW5**

ಪಾಟೀ ಸವಾಲುಃ ಶ್ರೀ ಹೆಚ್.ಆರ್.ಕೆ. 2 ನೇ ಆರೋಪಿ ಪರ ವಕೀಲರಿಂದಃ

ನಿಪಿ - 1 ರಲ್ಲಿ ತೋರಿಸಿರುವ ಕಾಂಕ್ರೀಟ್ ಮಿಕ್ಸರ್ ವಾಹನ ಯಾರಿಗೆ ಸಂಬಧಿಸಿದ್ದು ಎಂದು ನನಗೆ ಹೇಳಲು ಆಗುವುದಿಲ್ಲ.

ಮುಂದಿನ ಪಾಟೀ ಸವಾಲನ್ನು 1 ನೇ ಆರೋಪಿ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅನುಮೋದಿಸುತ್ತಾರೆ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.